ಶ್ರೀ ಕೆ. ಹರ್ಷಕಮಾರ್ ಗೌಡ (ಚಾಮರಾಜ) : ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಒಟ್ಟು ಇರುವ ಜವಳಿ ಉದ್ಯಮಗಳೆಷ್ಟು?
ಆ) ಅವುಗಳಲ್ಲಿ ಪ್ರಸಕ್ತ ಕಾರ್ಯ ನಿರ್ವಹಿಸುತ್ತಿರುವ ಗಿರಣಿಗಳೆಷ್ಟು?
ಇ) ನಿಂತು ಹೋಗಿರುವ ಜವಳಿ ಉದ್ಯಮಗಳೆಷ್ಟು? ಹಾಗೂ ಅವುಗಳನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?
ಈ) ಮೈಸೂರು ನಗರದ ಕೆ.ಆರ್.ಮಿಲ್ ಜವಳಿ ಗಿರಣಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಹೆಚ್. ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು) :

ಅ) 46 (ನಲವತ್ತಾರು ಮಾತ್ರ)
ಆ) 42 (ನಲವತ್ತೆರಡು ಮಾತ್ರ)
ಇ) 4 (ನಾಲ್ಕು ಮಾತ್ರ)
ಮುಚ್ಚಲಾಗಿರುವ ಗಿರಣಿಗಳು ಅವುಗಳ ಪುನರುಜ್ಜೀವನಕ್ಕಾಗಿ ಬಿಐಎಫ್‌ಆರ್ ಅರ್ಜಿ ಸಲ್ಲಿಸಬೇಕು. ಬಿಐಎಫ್‌ಆರ್ ಸಂಸ್ಥೆ ರಾಜ್ಯ ಸರ್ಕಾರ ಮತ್ತು ಹಣಕಾಸು ಸಂಸ್ಥೆಗಳೊಂದಿಗೆ ಸಮಾಲೋಚಿಸಿ ಅರ್ಹ ರಿಯಾಯ್ತಿಗಳೊಂದಿಗೆ ಪುನರುಜ್ಜೀವನಕ್ಕೆ ಆದೇಶಿಸುತ್ತದೆ. ಬಿಐಎಫ್‌ಆರ್‌ನ ಆದೇಶದಂತೆ ಪುನರುಜ್ಜೀವನಕ್ಕೆ ಕ್ರಮ ಕೈಗೊಳ್ಳಲಾಗುತ್ತದೆ. ಮೈಸೂರಿನ ಕೆ.ಆರ್.ಮಿಲ್ಸ್ ಮಾತ್ರ ಬಿಐಎಫ್‌ಆರ್‌ಗೆ ಅರ್ಜಿ ಸಲ್ಲಿಸಿದೆ.
ಈ) ಬಿಐಎಫ್‌ಆರ್. ತನ್ನ ಆದೇಶ ದಿನಾಂಕ : 5-6-89 ರಲ್ಲಿ ಮೈಸೂರಿನ ಕೆ. ಆರ್. ಮಿಲ್ಲನ್ನು ಪುನರುಜ್ಜೀವನಗೊಳಿಸುವುದು ಸಾಧ್ಯವಿಲ್ಲವೆಂದು ತಿಳಿಸಿದೆ. ಬಿಐಎಫ್‌ಆರ್‌ನ ಈ ಆದೇಶವನ್ನು ಎಐಐಎಫ್‌ಆರ್ ಕೂಡ ಅನುಮೋದಿಸಿ ದಿನಾಂಕ : 20-6-91 ರಂದು ಆದೇಶ ಹೊರಡಿಸಿದೆ.

<u>ವಿಷಯಃ- ಮೈಸೂರು ನಗರದ 4 ನೇ ಹಂತದ ಕುಡಿಯುವ ನೀರಿನ ಯೋಜನೆ.</u>

Q:41

ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮೈಸೂರು ನಗರದ 4 ನೇ ಹಂತದ ಕುಡಿಯುವ ನೀರಿನ ಯೋಜನೆಗೆ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು?
ಆ) ಈ ಯೋಜನೆ ಈಗ ಯಾವ ಹಂತದಲ್ಲಿದೆ?
ಇ) ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಆ) ಇದುವರೆವಿಗೂ ಈ ಯೋಜನೆಗೆ ಸರ್ಕಾರದಿಂದ ಯಾವುದೇ ಹಣ ಬಿಡುಗಡೆಯಾಗಿಲ್ಲ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ 50 ಲಕ್ಷ ರೂ.ಗಳು ಸಂದಾಯವಾಗಿವೆ.

ಆ) ಈ ಯೋಜನೆಯು ಕಾರ್ಯಗತವಾಗಲು ಜಾಕ್‌ವೆಲ್ ಬ್ರೆಕ್ ಪ್ರೆಶರ್ ಟ್ಯಾಂಕ್ ಹಾಗೂ ಏರು ಕೊಳವೆಗಳ ನಿರ್ಮಾಣಕ್ಕಾಗಿ ಭೂ ಸ್ವಾದೀನ ಕಾರ್ಯವನ್ನು ಕೈಗೊಳ್ಳಲು ಮಂಡ್ಯ ಮತ್ತು ಕಂದಾಯಾಧಿಕಾರಿಗಳನ್ನು ಕೋರಲಾಗಿದೆ.

ಇ) ಈ ಯೋಜನೆಯನ್ನು 4 ವರ್ಷದ ಅವಧಿಯಲ್ಲಿ ಮುಗಿಸಲು ಉದ್ದೇಶಿಸಿದೆ.

<u>ವಿಷಯ :- ವಿವೇಕನಗರ ಮತ್ತು ಶಾಂತಿನಗರ ಕ್ಷೇತ್ರಗಳಲ್ಲಿ ಕೈಗಾರಿಕಾ ತರಬೇತಿ.</u>

Q:1460

ಶ್ರೀ ಎಂ. ಮುನಿಸ್ವಾಮಿ ಎಂ.ಎಲ್.ಎ. (ಶಾಂತಿನಗರ) : ಮಾನ್ಯ ಕಾರ್ಮಿಕ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೇ?

1. ವಿವೇಕನಗರ, ಶಾಂತಿನಗರ ಕ್ಷೇತ್ರ, ಬೆಂಗಳೂರಿನಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
2. ಹಾಗಿದ್ದಲ್ಲಿ, ಕೈಗಾರಿಕಾ ತರಬೇತಿ ಸಂಸ್ಥೆಯು ಎಂದಿನಿಂದ ಎಲ್ಲಿ ಕಾರ್ಯ ನಿರ್ವಹಿಸುತ್ತಿದೆ.
3. ಕೈಗಾರಿಕಾ ತರಬೇತಿ ಸಂಸ್ಥೆಯನ್ನು ನಡೆಸಲು ಎಲ್ಲಾ ಪ್ರವರ್ಗದ ಹುದ್ದೆಗಳನ್ನು ಮಂಜೂರು ಮಾಡಲಾಗಿದೆಯೇ?
4. ಹಾಗಿದ್ದಲ್ಲಿ, ನೇಮಕಾತಿಗಳನ್ನು ಮಾಡಲಾಗಿದೆಯೇ, ಇಲ್ಲವೇ ?
5. ಇಲ್ಲದಿದ್ದಲ್ಲಿ ಕಾರಣವೇನು?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :

1. ಹೌದು.
2. ಡಿಸೆಂಬರ್ 92 ರಿಂದ ಕೈಗಾರಿಕಾ ತರಬೇತಿ ಸಂಸ್ಥೆ ಹೊಸೂರು ರಸ್ತೆ, ಬೆಂಗಳೂರು-29ರ ಆವರಣದಲ್ಲಿಕಾರ್ಯ ನಿರ್ವಹಿಸುತ್ತಿದೆ.
3. ಹೌದು.
4. ತರಬೇತಿ ಅಧಿಕಾರಿ ಮತ್ತು ಅಧ್ಯಕ್ಷರ ಹುದ್ದೆಗಳನ್ನು (ಮುಂಬಡ್ತಿ ಹುದ್ದೆಗಳು) ಬಿಟ್ಟು ಉಳಿದ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.
5. ತರಬೇತಿ ಅಧಿಕಾರಿ ಮತ್ತು ಅಧ್ಯಕ್ಷರ ಹುದ್ದೆಗಳು ಬಡ್ತಿ ಹುದ್ದೆಗಳಾಗಿದ್ದು, ಮುಂಬಡ್ತಿ ಪ್ರಸ್ತಾವನೆ ಅಂತಿಮಗೊಂಡ ಕೂಡಲೇ ಭರ್ತಿ ಮಾಡಲಾಗುವುದು.

<u>ವಿಷಯ :- ಗುಲ್ಬರ್ಗ ಜಿಲ್ಲೆಯಲ್ಲಿ ಪರವಾನಗಿ / ಪರವಾನಗಿ ಇಲ್ಲದ ಕಲ್ಲುಗಣಿಗಳು.</u>